International Journal of Advance and Applied Research (IJAAR)
Peer Reviewed Bi-Monthly
ISSN – 2347-7075
Impact Factor – 0.899
Vol.6 No.3 Jan – Feb 2019

# ಜನಪದ ಗಾದೆಗಳು

**ಬಸವರಾಜ ಎಂ.ಕೊನೇರಿ**
ಕನ್ನಡ ಸಹಾಯಕ ಪ್ರಾಧ್ಯಪಕರು, ಸ.ಪ್ರ.ದ.ಕಾಲೇಜು, ಸೇಡಂ

ಜನಪದ ಸಾಹಿತ್ಯ ಪ್ರಕಾರಗಳಲ್ಲಿ ಗಾದೇಯ ಅತ್ಯಂತ ಜನಪ್ರಿಯಾವಾದುದ್ದು ಮಾನವ ಸಮಾಜದಲ್ಲಿ ಇದರಷ್ಟು ವ್ಯಪಕವಾದ ಪ್ರಭವಶಾಲಿಯಾದ ಆಕರ್ಷಣೀಯವಾದ ಪ್ರಯೋಜನಕಾರಿಯಾದ ಸಾಹಿತ್ಯ ಪ್ರಕಾರ ಮತ್ತೊಂದಿಲ್ಲ.ಜ್ಞಾನಿ -ಅಜ್ಞಾನಿ ಸಾಮಾನ್ಯ -ಅಸಮಾನ್ಯ ಕಾರ್ಮಿಕ ಮಾಲೀಕ ಕವಿ ಪಂಡಿತ ಆಳು-ಅರಸು ಮೇಲು-ಕೀಳು ಎಂಬ ತಾರತಮ್ಯವಿಲ್ಲದೆ ಅದು ಸರ್ವ ಮಾನವರ ಬಾಳನ್ನು ಪ್ರವೇಶಿಸುತ್ತದೆ. ಗಾದೆ ಇದು ಮಾನವನ ಸಂಸ್ಕೃತಿಯ ಅವಿಭಾಜ್ಯ ಅಂಗ. ಗಾದೆ ಎಂಬುದನ್ನು ಸೂತ್ರಪ್ರಾಯವಾಗಿ ನಿರುಪಿಸುವುದು ಕಷ್ಟ ಆದರೆ ಗಾದೆ ಮಾತನ್ನು ಬಳಸುವುದ ಕಷ್ಟವಲ್ಲ ಪ್ರತಿಯೊಬ್ಬ ಮನುಷ್ಯನೂ ತನ್ನ ಜೀವನದಲ್ಲಿ ಒಮ್ಮೆಯಾದರೂ ಒಂದಾದರೂ ಗಾದೆಯನ್ನು ಬಳಸಿರುತ್ತಾರೆ.ಗಾದೆಯನ್ನು ಬಳಸದ ಮನುಷ್ಯನಿಲ್ಲ ಗಾದೆ ಹೆಚ್ಚು ವ್ಯಾಪಕವಾದದ್ದು, ಜನಸಮ್ಮೂಖಿವಾದದ್ದು. ಜನಪ್ರಿಯವಾದದ್ದು ಗಾದೆಯಲ್ಲಿ ಅನುಭವ ಸಾಂದ್ರತೆ ವಸ್ತು ವೈವಿಧ್ಯತೆ ಸಂಸ್ಕೃತಿ ಸಂಪನ್ನತೆ ವಿಚಾರ ವೈಭವ, ಬದುಕಿನ ವಿಶ್ಲೇಷಣೆ ಇದೆ. ಸಂಸ್ಕೃತದ **"ಗಾಥಾ"** ಶಬ್ದದ ತದ್ಬವವೇ ಗಾದೆ ಎನ್ನುತ್ತಾರೆ. ಸಂಸ್ಕೃತದ ಗಾಥಾ ಶಬ್ದದ ತದ್ಬವವೇ ಗಾದೆಯಾಗಿದೆ. ಜನಪದರ ಬದುಕ ಬವಣೆಯಲ್ಲಿ ಮಾತು ಕೃತಿಯಲ್ಲಿ ಗಾದೆ ಹಾಸುಹೊಕ್ಕಾಗಿದೆ. ಮಾತು ಮಾತಿಗೂ ಗಾದೆ ಬಳಸುವ ಜನರೂ ಉಂಟು, ಗಾದೆ ಜನಸಾಮಾನ್ಯರ ಸಂಗಾತಿ ಲೋಕಾನುಭವದ ಸ್ಥಿತಿ .

ಜನಪದ ಗಾದೆಗಳು ಮೂಲತ: ಜನಪದ ಕಾವ್ಯಾಂಗಗಳೇ, ಹಿಂದೆ ಅವೂ ಕೂಡ ಪ್ರಾಸ ಲಯಬದ್ಧ ರಚನೆಗಳಾಗಿದದ್ದಂತೆ ಕಾಣುತ್ತದೆ. ಎಷ್ಟೋ ದಿನದ ಸಂಸ್ಕಾರದಿಂದ ಜನಮನ್ನಣೆ ಪಡೆದ ಗಾದೆ ಶಾಶ್ವತವಾಗಿ ನಿಲ್ಲುತ್ತದೆ. ಕಟ್ಟದವೆಲ್ಲ ಗಾದೆಗಳಾಗುವುದಿಲ್ಲ.ಗಾದೆಯನ್ನು ಜನಸಪದರ ಹಿಡಿನುಡಿ ಎನ್ನಬಹುದು ಗಾದೆಗಳ ಹಿದಿರುವ ಸತ್ಯ ಸಾರ್ವತ್ರಿಕ ಹಾಗೂ ಸಾರ್ವಕಾಲಿಕ ಗಾದೆಗಳಿಂದ ಜನರ ಮನಸ್ಸಿನ ಮೌಲ್ಯಗಳ ಹಲವು ಬಣ್ಣಗಳು ಕಾಣಬಹುದು,

ಸಂಸ್ಕೃತದ ಗಾಥಾ ಶಬ್ದದ ತದ್ಬವವೇ " ಗಾದೆ "ಯಾಗಿದೆ ಎನ್ನುತ್ತಾರೆ ನಾಣ್ಣುಡಿ ಎಂಬ ಅಚ್ಚ ಕನ್ನಡ ಶಬ್ದ ಗಾದೆಯ ಅರ್ಥವನ್ನು ಧ್ವನಿಸುತ್ತದೆ. ಗಾದೆಗೆ ಬಳಕೆಯಲ್ಲಿರುವ ಸಂವಾದಿ ಶಬ್ದಗಳು ಹೀಗಿವೆ : ಲೋಕೋಕ್ತಿ, ಪ್ರಾಚೀನೋಕ್ತಿ, ಸಾಮತಿ, ಸೂಕ್ತಿ ,ಸೂತ್ರ ಸಾರೋಕ್ತಿ, ಹೇಳಿಕೆ ಉದ್ದರಣೆ, ವಿಧಿ, ನಿಯಮ, ಪ್ರಮಾಣ, ಸುಭಾಷಿತ, ನಾಣ್ಣುನುಡಿ ಇತ್ಯಾದಿ.

**ಗಾದೆಯ ಲಕ್ಷಣಗಳು**

ಗಾದೆಯ ಲಕ್ಷಣದ ಬಗೆಗೆ ವಿದ್ವಾಂಸರು ಹೀಗೆ ಅಭಿಪ್ರಾಯಪಟ್ಟಿದ್ದಾರೆ.

ಜೇಮ್ಸ್ ಎ. ಕೆಲ್ಲೋ ಪ್ರಕಾರ ಸಂಕ್ಷಿಪ್ತತೆ, 'ಸಂವೇದಾನ ಶೀಲತೆ ತೀಕ್ಷಣತೆ ಮತ್ತು ಜನಪ್ರಿಯತೆ ಇವು ಗಾದೆಯ ನಾಲ್ಕು ಗುಣಗಳಾಗಿವೆ. I

ಲಾರ್ಡ ಜಾನ್ ರಸೆಲ್ ರವರ ಪ್ರಕಾರ : ಗಾದೆ ಹಲವರ ಜ್ಞಾನ, ಒಬ್ಬರ ವಿವೇಕ"

ದ.ರಾ ಬೇಂದ್ರು: " ಗಾದೆ ಮಾತುಗಳೆಂದರೆ ಅಚ್ಚುಕಟ್ಟಾದ ನಿರ್ಣಯಗಳಲ್ಲ, ವಿವೇಕ ಜಾಗೃತಿ ಮಾಡುವ ಸುಭಾಷಿತಗಳು"

ಥಾಮಸ್ ಹುಲ್ಲರ್ " ಸರ್ವೇಸಾಮಾನ್ಯವಾದ ಮತ್ತು ಗಮನಾರ್ಹವಾದ ಉಪಯೋಗ ದಲ್ಲಿನ ಅಡಕವೂ ಸಾರಭೂತವೂ ಆದ ಮಾತು ಅಥವಾ ಹೆಚ್ಚು ವಿಷಯಗಳನ್ನು ಕೆಲವೇ ಮಾತುಗಳಲ್ಲಿ ಭಟ್ಟಿ ಇಳಿಸಿದುದು ಗಾದೆ.

ಇಸೆಲಿಯನ್ (ಜರ್ಮನೆ ಗಾದೆಗಳ ಸಂಗ್ರಾಹಕ)"ಗಾದೆಗಳೆಂದರೆ ಜನಸಾಮಾನ್ಯರಲ್ಲಿ ಚಲಾವಣೆ ಯಲ್ಲಿರುವ, ಸಾರ್ವಜನಿಕ ಮುದ್ರೆ ಬಿದ್ದಿರುವ ಪ್ರಚಲಿತವೂ ಸ್ವೀಕೃತ ಮೌಲ್ಯಭರಿತವೂ ಆಗಿರುವ ನಾಣ್ಯ "

ರಾಮೆಗೌಡರ ಪ್ರಕಾರ 'ಗಾದೆಯೆಂದರೆ ಸದ್ಯೋಜಾತ ನುಡಿಗಟ್ಟು ಸೂಕ್ತ ಸಂದರ್ಭದಲ್ಲಿ ತಾಳಿದ ಯೋಗ್ಯ ನಿರ್ಣಯಗಳು.

ಬಾಳಿನ ಅಭಿವ್ಯಕ್ತಿಯಾದ ಗಾದೆಯಲ್ಲಿ ಬದುಕಿನ ರೀತಿ ಪ್ರೀತಿ ಮೇಳವಿಸಿದೆ. ಕನ್ನಡದ ವಚನಗಳಂತೆ ಗಾದೆ ಗದ್ಯಪದ್ಯ ಎರಡರಲ್ಲೂ ಹುಟ್ಟಿವೆ ಸುಲಭವಾಗಿ ನೆನಪಿಟ್ಟುಕೊಳ್ಳ ಬಹುದಾದ ಇವುಗಳಲ್ಲಿ ಕಾವ್ಯಗುಣವೂ ಉಂಟು ನಾಟಕೀಯತೆಯೂ ಉಂಟು, ಗಾದೆಗಳಲ್ಲಿ ಅತ್ಯುಕ್ತಿ ವಿರೋಧಾಭಾಸ, ಸ್ವಭಾವೋಕ್ತಿಗಳೂ ಇವೆ ಅಚ್ಚುಕನ್ನಡ ಛಂದೋರೂಪಗಳೇ ಕನ್ನಡ ಗಾದೆಗಳ ಮೂಲವಾಗಿರುವಂತೆ ತೋರುತ್ತದೆ ಏಕೆ, ತ್ರಿಪದಿ, ಸಾಂಗತ್ಯ, ಷಟ್ಪದಿ ಮೊದಲಾದವುಗಳ ಬಿಡಿಭಾಗಗಳಂತೆ ಕೆಲವು ಗಾದೆ ಕಾಣುತ್ತವೆ. ಜನಪದರಿಂದ ಜನಪ್ರಿಯ ಗಾದೆ ಸೃಷ್ಟಿಯಾದರೆ, ವಿದ್ಯಾವಂತರಿಂದ ಸಾಹಿತ್ಯಕ ಗಾದೆ ಸೃಷ್ಟಿಯಾಗುತ್ತದೆ. ಗಾದೆಗಳನ್ನು ಜನಪದ ಗಾದೆಗಳು ಗ್ರಂಥಸ್ಥ ಗಾದೆಗಳು ಆಧುನಿಕ ಗಾದೆಗಳು ಎಂದು ವಿಭಾಗಿಸಿಕೊಂಡು ಅಭ್ಯಸಿಸಲು ಸಾಧ್ಯವಿದೆ.

ಭಾರತದಲ್ಲಿ ವೇದ ಉಪನೀಷತ್ತು ವಿಷ್ಣು ಪುರಾಣ, ಶಿವಪುರಾಣ, ಜೈನಪುರಾಣ, ಮಹಾಭಾರತ ರಾಮಾಯಣ, ಧಮ್ಮಪದ ಪಂಚತಂತ್ರ ಮೊದಲಾದ ಗ್ರಂಥಗಳಲ್ಲಿ ಗಾದೆಗಳಿವೆ ಎಲ್ಲಾ ದೇಶಗಳಲ್ಲೂ ಗ್ರಾಂಥಸ್ಥವಾಗಿ ಮೌಖಿಕವಾಗಿ ಗಾದೆಗಳು ಬಳಕೆಯಲ್ಲಿವೆ ಗಾದೆಗಳಲ್ಲಿ ಸಮತೆ ಸಾರ್ವತ್ರಿಕತೆ ಉಂಟು, ಅಂಶಿಕವಾಗಿ ಗಾದೆ ವಲಸೆಯ ಗುಣವನ್ನೂ ಹೊಂದಿದೆ. ಆದರೆ ಭಾಷಾ ವಲಸೆ ಕಡಿಮೆ ಪ್ರಾದೇಶಿಕ ಸ್ಥರೂಪದ ಜೋತೆಗೆ ರಾಷ್ಟ್ರೀಯ ಗುಣಧರ್ಮವೂ ಇದೆ. ಜನಪ್ರಿಯ ಅಭಿಪ್ರಾಯದ ಮೇಲೆ ಸೂಕ್ಷ್ಮವೂ ವ್ಯಾಪಕವೂ ಆದ ಪ್ರಭಾವವನ್ನು ಹೊಂದಿರುವುದರಿಂದ , ಜನಪದ ಸಾಮಾಜಿಕ , ರಾಜಕೀಯ, ನೈತಿಕ ಧಾರ್ಮಿಕ ಆದರ್ಶಗಳಿಗೆ ನಂಬಲರ್ಹ ಸಾಕ್ಷಿಗಳಾಗಿರುವುದರಿಂದ ಗಾದೆಗಳ ಅಧ್ಯಯನ ಪ್ರಸ್ತುತವಾಗಿದೆ.

ಜನಪದ ಗಾದೆಗಳನ್ನು ಸ್ಥಿರ ನುಡಿಗಟ್ಟಿನ (Fixed Phrase generes) ಗಮನಿಸುತ್ತಾರೆ. ಗಾದೆ ಪ್ರಜ್ಞಾಪೂರ್ವಕವಾಗಿ ರಚಿಸಿದ ಸಾಹಿತ್ಯ ಪ್ರಕಾರವಲ: ಸಹಜವಾಗಿ ,ಮಾತಿನ ಓಘದಲ್ಲಿ ಸೃಷ್ಟಿಯಾಗಿ ಪ್ರವಹಿಸುತ್ತದೆ ಸಾಹಿತ್ಯ ಹಾಗೂ ಭಾಷಿಕ ವೈಲಕ್ಷಣಗಳ ಸಮ್ಮಿಲನ ಗಾದೆಎದ, ಅಂದರೆ . ಇದು ಪೂರ್ಣ ಸಾಹಿತ್ಯವೂ ಅಲ್ಲ ಪೂರ್ಣ ಭಾಷಿಕವೂ ಅಲ್ಲ. ಗಾದೆಗಳಲ್ಲಿ ಉಪಮೆ, ರೂಪಕ, ದೃಷ್ಟಾಂತಗಳೂ ಬಳಕೆಯಾಗುತ್ತವೆ. ಗಾದೆಗಳಲ್ಲಿ ವಿಷಯ (Topic) ಮತ್ತು ಟೀಕೆ (Comment) ಎಂಬ ರಚನಾ ಘಟಕಗಳು ಮುಖ್ಯವಾಗಿವೆ.

**ಗಾದೆಗಳ ವರ್ಗೀಕರಣ:**

ಗಾದೆಗಳ ವರ್ಗೀಕರಣದ ಬಗೆಗೆ ಹಲವು ವಿಧಾನಗಳನ್ನು ಯೋಚಿಸಲಾಗಿದೆ. ವಸ್ತುವಿನ ದೃಷ್ಟಿಯಿಂದ ವರ್ಗೀಕರಿಸುವುದು ಹೆಚ್ಚು ಸೂಕ್ತವೆಂದು ಭಾವಿಸಲಾಗಿದೆ. ವಸ್ತುವಿನ ಆಧಾರದ ಮೇಲೆ ಗಾದೆಗಳನ್ನು ಹೀಗೆ ವರ್ಗೀಕರಿಸಬಹುದು; ಪೌರಾಣಿಕ ಗಾದೆಗಳು, ಚಾರಿತ್ರಿಕ ಗಾದೆಗಳು, ಐತಿಹ್ಯ ಗಾದೆಗಳು, ಸಾಮಾಜಿಕ ಗಾದೆಗಳು, ಸಾಹಿತ್ಯಕ ಗಾದೆಗಳು, ವೃತ್ತಿಪರ ಗಾದೆಗಳು, ವೈದ್ಯಕೀಯ ಗಾದೆಗಳು, ಹವಾಮಾನ ಗಾದೆಗಳು, ಕೌಟುಂಬಿಕ ಗಾದೆಗಳು, ಸಾಂಪ್ರದಾಯಿಕ ಗಾದೆಗಳು, ವೈನೋದಿಕ ಗಾದೆಗಳು, ಕಥನಾತ್ಮಕ ಗಾದೆಗಳು ಇತ್ಯಾದಿ.

ವಾರನ್ ರಾಬರ್ಟ್ ಎಂಬ ವಿದ್ವಾಂಸರು ದಶಮಾಂಶ ಪದ್ಧತಿಯಲ್ಲಿ ಗಾದೆಗಳನ್ನು ವರ್ಗಿ ಕರಿಸಿದ್ದಾರೆ. ಈ ಪದ್ಧತಿಯಿಂದ ಗಾದೆಗಳ ಪರಸ್ಪರ ಸಂಬಂಧ, ಉದ್ದೇಶಗಳನ್ನು ಗುರುತಿಸಲು ಸಾಧ್ಯವಾ ಗುತ್ತದೆ. ಈ ಕ್ರಮದಲ್ಲಾಗಲೀ ಮೇಲಿನ ವರ್ಗೀಕರಣ ಹಿನ್ನೆಲೆಯಾಗಲೀ ಕನ್ನಡ ಗಾದೆಗಳ ಸಂಗ್ರಾಹಕರು ತಮ್ಮ ಗ್ರಂಥಗಳನ್ನು ಪ್ರಕಟಿಸಿಲ್ಲ. ಕೇವಲ ಅಕಾರಾದಿಯಾಗಿ ಗಾದೆಗಳನ್ನು ಮುದ್ರಿಸುವ ಕ್ರಮವನ್ನು ಅನುಸರಿಸಿದ್ದಾರೆ.

ಕನ್ನಡದಲ್ಲಿ ಐದು ಸಾವಿರಕ್ಕೂ ಮೀರಿದ ಶುದ್ಧ ಜನಪದ ಗಾದೆಗಳಿವೆ. ಇದರ ಇಮ್ಮಡಿ ಮುಮ್ಮಡಿ ಸಂಖ್ಯೆಯಲ್ಲಿ ಅಲ್ಪ ಸ್ವಲ್ಪ ಬದಲಾವಣೆಯ ಪಾಠಾಂತರ ಗಾದೆಗಳು ದೊರೆಯುತ್ತವೆ, ಗಾದೆಗಳಿಂದ ಮಾತಿಗೆ ಅನುಭವದ ಮಹತ್ವ ಪ್ರಾಪ್ತವಾಗುತ್ತದೆ; ನೀತಿ, ಜ್ಞಾನಬೋಧೆ. ತಿಳುವಳಿಕೆ, ಪ್ರಪಂಚಜ್ಞಾನ ದೊರಕುತ್ತದೆ; ಸಾಂಸ್ಕೃತಿಕ ಅಧ್ಯಯನಕ್ಕೆ ಅಪೂರ್ವ ಸಾಮಗ್ರಿ ಲಭ್ಯವಾಗುತ್ತದೆ.

ಆಧುನಿಕ ಕಾಲದಲ್ಲೂ ಜನಸಾಮಾನ್ಯರಿಂದ, ಸಾಹಿತಿ ಕಲಾವಿದರಿಂದ ಗಾದೆಗಳು ಹುಟ್ಟುತ್ತಿರುತ್ತವೆ. 'ಅಂತರ್‌ರಾಷ್ಟ್ರ ಮಟ್ಟದ ಕ್ರಿಕೆಟ್ ಸ್ಪರ್ಧೆ, ಗಾಯನ ಪ್ರದರ್ಶನ, ವಿವಿಧ ವಿದ್ಯಮಾನಗಳ ಹಿನ್ನೆಲೆಯಲ್ಲಿ ತಾತ್ಕಾಲಿಕ ಗಾದೆಗಳ ಸೃಷ್ಟಿ ಅಧಿಕವಾಗುತ್ತವೆ. ಕೆಲವು ಹೊಸದಾಗಿ ಹುಟ್ಟಿದರೆ, ಹಲವು ಹಳೆಯ ಗಾದೆಗಳ ಅನುಕರಣೆಗಳಾಗಿರುತ್ತವೆ.

ಇಂಥವುಗಳನ್ನು ಆಧುನಿಕ ಗಾದೆಗಳು' ಎಂದು ಕರೆಯಬಹುದು: ಆಧುನಿಕ ಗಾದೆಗಳಿಗೆ ಆಯಸ್ಸು ಕಡಿಮೆ, ಜನಪದ ಗಾದೆಗಳಿರುವ ಸಾರ್ವತ್ರಿಕ, ಸಾಮೂಹಿಕತೆ ಸಮಷ್ಟಿ ಸ್ವೀಕೃತ ಆಧುನಿಕ ಗಾದೆಗಳಿಗೆ ಇರುವುದಿಲ್ಲ.

**ಗಾದೆಯನ್ನು ಕುರಿತ ಗಾದೆಗಳು**

| | |
|---|---|
| ಗಾದೆ ವೇದಕ್ಕೆ ಸಮಾನ | (ಕನ್ನಡ) |
| ವೇದ ಸುಳ್ಳಾದರೂ ಗಾದೆ ಸುಳ್ಳಾಗದು | (ಕನ್ನಡ) |
| ಗಾವೆ ಸುಳ್ಳಾದಾಗ ಹಾಲೂ ಹುಳಿಯಾದೀತು | (ಮಲೆಯಾಳಂ) |
| ಗಾದೆ ತಿಳಿದ ವಿವೇಕಿ ಜಗಳ ಬಿಡಿಸುತ್ತಾನೆ. | (ಆಫ್ರಿಕ) |
| ಗಾದೆಯನ್ನು ಯಾವುದೂ ಮೀರಿಸಲಾರದು | (ಐರಿಷ) |
| ಪ್ರತಿಯೊಂದು ಗಾದೆಯೂ ಸತ್ಯ | (ವೇಲ್ಸ್) |
| ಗಾದೆ ಜನರ ನಾಣ್ಯ | (ರಷ್ಯಾ) |
| ಊಟದಲ್ಲಿ ಉಪ್ಪಿದ್ದಂತೆ, ಮಾತಿನಲ್ಲಿ ಗಾದೆ | (ಅರೇಬಿಯ) |
| ಗಾದೆ ಬಲ್ಲವನಿಗೆ ಮಾತಿಗೆ ತೊಂದರೆಯಿಲ್ಲ | (ಚೈನಾ) |
| ಗಾದೆ ಭಾಷೆಗೆ ಭೂಷಣ | (ಪರ್ಷಿಯ) |
| ಕಾಲ ಕಳೆದು ಹೋಗಬಹುದು. ಆದರೆ ಮಾತು ಉಳಿಯುತ್ತದೆ | (ಹಿಂದಿ) |
| ಗಾದೆ ಎಂದೂ ಸುಳ್ಳು ಹೇಳುವುದಿಲ್ಲ | (ಜರ್ಮನಿ) |
| ಗಾದೆಗಳ ಬಗ್ಗೆ ಗಮನವಿಲ್ಲದವನು ತಪ್ಪುಗಳನ್ನು ತಪ್ಪಿಸಲಾರ | (ತುರ್ಕಿ) |
| ಗಾದೆ ಹೇಳೋಕೆ, ಬಾನ ಉಳ್ಳೋಕೆ | (ಕನ್ನಡ) |

**ಸರಳವಾದ ಗಾದೆಗಳು**

ಮಾಡಿದ್ದುಣ್ಣೋ ಮಹರಾಯ.

ಬೆಳ್ಳಗಿರುವುದೆಲ್ಲ ಹಾಲಲ್ಲ

ಮಿಂಚಿಹೋದ ಕಾಲಕ್ಕೆ ಚಿಂತಿಸಿ ಫಲವೇನು?

ಹುಣಿಸೇ ಮರ ಮುಪ್ಪಾದರೆ ಹುಳಿ ಮುಪ್ಪೇ?

ಕೂತ ತಿಂದರೆ ಕುಡಿಕೆ ಹೊನ್ನು ಸಾಲದು.

ಹಾಸಿಗೆ ಇದ್ದಷ್ಟು ಕಾಲು ಚಾಚು.

ತಾಳಿದವನು ಬಾಳಿಯಾನು.

ಮನಸ್ಸಿದ್ದರೆ ಮಾರ್ಗ.

ಉತ್ತರನ ಪೌರುಷ ಒಲೆ ಮುಂದೆ,

ಗಂಡ ಹೆಂಡಿರ ಜಗಳ ಉಂಡು ಮಲಗುವ ತನಕ,

ತಾಯಿಯಂತೆ ಮಗಳು ನೂಲಿನಂತೆ ಸೀರೆ.

**ಸಾಮಾಜಿಕ ಗಾದೆಗಳು**

ಕಾರ್ಯವಾಸಿ ಕತ್ತೆ ಕಾಲು ಹಿಡಿ.

ಮುಖ ನೋಡಿ ಮಣೆ ಹಾಕು,

ತೋಳ ಹಳ್ಳಕ್ಕೆ ಬಿದ್ದರೆ ಆಳಿಗೊಂದು ಕಲ್ಲು,

ಸಾಹುಕಾರರ ಮನೆ ನೋಟ ಚಂದ, ಬಡವರ ಮನೆ ಊಟ ಚಂದ

ನವಿಲು ನೋಡಿ ಕೆಂಬೂತ ಪುಕ್ಕ ತರಕಂಡಂಗೆ

ಬೆಕ್ಕಿಗೆ ಚೆಲ್ಲಾಟ, ಇಲಿಗೆ ಪ್ರಾಣಸಂಕಟ.

ಮನೇಲಿದ್ದರೆ ಲಿಂಗಾಕಾರ, ಹಾದಿ ಹಿಡಿದರೆ ಚಕ್ರಾಕಾರ,

ಇಲ್ಲಿಗೂ ಬಂದೆಯಾ ಜಡೆಶಂಕರ,

ಅತ್ತೆಗೊಂದು ಕಾಲ, ಸೊಸೆಗೊಂದು ಕಾಲ.

ಊರ ಚಿಂತೆ ಹಚ್ಚಿಕೊಂಡು ವೀರಶೆಟ್ಟಿ ಬಡವಾದ.

ಮನೆಗೆ ಮಾರಿ, ಪರರಿಗೆ ಉಪಕಾರಿ.

ಕನ್ನಡಿಯೊಳಗಿನ ಗಂಟಿಗಿಂತ, ಕೈಯೊಳಗಿನ ದಂಟು ಲೇಸು.

ತಿಡ್ಕೊಂಡು ಬಂದ್ರೂ ಕಕ್ಕೊಂಡು ಉಣ್ಣು.

ಅನ್ನ ಇಕ್ಕಿ ಸಾಕು ಅನ್ನಿಸಬಹುದು, ಹಣ ಕೊಟ್ಟು ಸಾಕು ಅನ್ನಿಸುಕಾಗಲ್ಲ

ಅನ್ಯಾಯದ ಗಳಿಕೆ ಅಡಿವೀ ಪಾಲು .

**ನೀತಿ ಗಾದೆಗಳು**

ಅಟ್ಟ ಹತ್ತೋರಿಗೆ ಮೆಟ್ಟು ಕೊಡಬಹುದು; ಬೆಟ್ಟ ಹತ್ತೋರಿಗೆ ಕೊಡುಕಾಗದ?

ಅಟ್ಟಮೇಲೆ ಒಲೆ ಉರೀತು, ಕೆಟ್ಟಮೇಲೆ ಬುದ್ದಿ ಬಂತು.

ಅಡಕೆಗೆ ಹೋದ ಮಾನ ಆನೆ ಕೊಟ್ರು ತಾನೆ ಬತ್ತದ?

ಅಪ್ಪ ತೋಡಿದ ಬಾವಿ ಅಂತ ಉಪ್ಪು ನೀರು ಕುಡಿಯೋಕಾಗ್ತದ?

ಆಳೋರ ಎಡಗಡೆ ಕೂತ್ಕಬಾರ್ದು, ಹೊಲಿಯೋರ ಬಲಗಡೆ ಕುಕ್ಕೋಬಾರ್ದು.

ಉಪ್ಪಿಕ್ಕಿದ ತಾಯಿನ ಮುಪ್ಪಿನ ತನಕ ನೆನೀಬೇಕು.

ಊಟಕ್ಕೆ ಮುಂದಿರಬೇಕು; ಸ್ನಾನಕ್ಕೆ ಹಿಂದಿರಬೇಕು.

ಒಡೆದ ಹಾಲು ಹೆತ್ಕಳಲ್ಲ; ಒಡೆದ ಮನಸ್ಸು ಹೊಂದೊಳ್ಳಲ್ಲ.

ಒಳ್ಳೆ ಶಕುನ ಅಂತ ಇಳೆಲ್ಲ ಕಳ್ಳತನ ಮಾಡಾಕಾದಾತ.

ಕಡಹುಟ್ಟಿ ಬಡವ ಕೆಟ್ಟ.

ಸಗಣಿಯವನೊಡನೆ ಸರಸಕ್ಕಿಂತ ಗಂಧದವನೊಡನೆ ಗುದ್ದಾಟ ಲೇಸು.

ದೂರದ ಬೆಟ್ಟ ನುಣ್ಣಗೆ.

ಬೆಣ್ಣೆಯಲ್ಲಿ ಕೂದಲು ತೆಗೆದಂತೆ,

ಹೊಳೆಯಲ್ಲಿ ಹುಣಸೆಹಣ್ಣು ತೊಳೆದಂತೆ,

**ಪೌರಾಣಿಕ ಗಾದೆಗಳು**

ಅಂತೂ ಇಂತೂ ಕುಂತಿ ಮಕ್ಕಳಿಗೆ ರಾಜ್ಯವಿಲ್ಲ.

ರಾಮರಾಜ್ಯ ಬಂದರೂ ರಾಗಿ ಬೀಸೋದು ತಪ್ಪಿತೇ?

ರಾತ್ರಿಯೆಲ್ಲಾ ರಾಮಾಯಣ ಕೇಳಿ

ಬೆಳಗಾಗೆದ್ದು ರಾಮಗೂ ಸೀತೆಗೂ ಏನು ಸಂಬಂಧ ಅಂತ ಕೇಳಿದಂಗೆ.

ಜಗಳದಿಂದ ಕೌರವರು ಕೆಟ್ಟರು, ಹೆಣ್ಣಿನಿಂದ ರಾವಣ ಕೆಟ್ಟ

**ಚಾರಿತ್ರಿಕ ಗಾದೆಗಳು**

ಬುಕ್ಕರಾಯ ಮೆಚ್ಚಿ ಬೆಕ್ಕಿನ ಮರಿ ಇತ್ತ

ನಂದರಾಜನ ಬದುಕು ನಾಯಿ ನರಿ ಪಾಲಾಯ್ತು.

ಕಂದೇಗಾಲದ ರಾಜರು ಕನ್ನೆ ಹೊತ್ತಗೆ.

ಯುವರಾಜ ಮಹಾರಾಜ ಸೇರಿ ಮಾರಿ ಮಂಟಪಕ್ಕೆ ಬೆಂಕಿ ಹಾಕಿದಂತೆ

ಕುಂತು ಕುಣಿಗಲ್ ಗೆದ್ದ, ನಿಂತು ಮಾಗಡಿ ಗೆದ್ದ,

ಮಾತಿಲ್ಲದೆ ಗೆದ್ದ ಮಧುರೇನ,

**ಐತಿಹ್ಯ ಗಾದೆಗಳು**

ನಂದಿಯನ್ನು ನೋಡದವನು ಹಂದಿಗಿಂತ ಕಡೆ.

ರಾಮೇಶ್ವರಕ್ಕೆ ಹೋದರೂ ಶನೀಶ್ವರ ಬಿಡ.

ತಿರುಪತಿ ಕ್ಷೌರಿಕರು ತಲೆ ಬೋಳಿಸಿದಂತೆ,

ಮೇಲುಕೋಟೆ ಜಾತ್ರೆಲಿ ನನ್ನ ಬೋಳು ದಾಸಯ್ಯನ ಕಂಡ್ರ ಅಂದಂಗೆ,

ಗೂಳೂರು ಗಟ್ಟಿ ಏಳೂರು ಅನ್ನ ಕೆಡಿಸಿತು.

ಮಣ್ಣೇ ನೋಡದ ತಾಯಿ, ನೀನು ಮಾಗಡಿ ನೋಡೋದು ದಿಟವ?

ಕಾಲವಲ್ಲದ ಕಾಲದಲ್ಲಿ ಕಾಗೆ ರಾಗಿ ತಿಂತು.

ಗೋಲಿ ಗಾತ್ರ ಮುದ್ದೆ ಮಾಡಿ, ಗೋರಿ ಕಾಯಿ ತಾಳ ಮಾಡಿ

ಗೋಳಾಡ್ಕೊಂಡು ಇಕ್ಕಿದ್ದು ಗೂಳೂರೋಳು,

**ಹವಾಮಾನ ಗಾದೆಗಳು**

ಆದರೆ ಹಸ್ತ ಆಗದಿದ್ದರೆ ಹಲ್ಲು ಕಿಸ್ತ

ಅತ್ತದ ಮಳೆ ಹುಯ್ದಿದ್ರೆ, ಹೆತ್ತಾಯಿ ಮಕ್ಕಳಿಗೆ ಹಿಟ್ಟಿಕ್ಕಲ್ಲ,

ಅತ್ತದ ಮಳೆ ಎತ್ತಿಂದಾದ್ರೂ ಬತ್ತದೆ.

ಅಸಲೆ ಮಳೆ ಬಿಸಿಲು ಕಾದು ಹೋಯ್ತು.

ಮಗೆ ಮಳೆ ಮಾಡ ಕಟ್ಟಿ ಹೋಯ್ತು.

ಉತ್ತರೆ ಮಳೆ ಹುಯ್ದರೆ, ಉತ್ತೆತ್ತು ಉಕ್ಕೆ ದೋಣೇಲಿ ನೀರು ಕುಡೀತದೆ.

ಉದ್ರೆ ಮಳೆ ಉಬ್ಬುಟ್ಟುಲು,

ಕುಟುಕೋ ಮಳೆ ಬೇಡ, ಲೋಟಕಿ ಹೆಂಡು ಬೇಡ,

ಬಡಗಲ ಮಿಂಚು ಮಿಂಚಿದರೆ, ಬಡೆತ್ತು ಮಾಡಿಕೋ ಅಂತ

**ಕೌಟಂಬಿಕ ಗಾದೆಗಳು**

ತಾಯಿಗಿಂದ ಬಂಧುವಿಲ್ಲ, ಉಪ್ಪಿಗಿಂತ ರುಚಿಯಿಲ್ಲ,

ಅಳಿಯಾ ಮನೆ ತೊಳಿಯಾ

ಹಿರಿಯಕ್ಕನ ಚಾಳಿ ಮನೆಮಂದಿಗೆಲ್ಲ

ಸಾಯ್ತಿನಿ ಅಂತ ಸಾವಿರ ಕೋಳಿ ತಿಂದ

ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ

ಹಿರಿಯ ಮಗನಾಗಬೇಡ, ಬಾಗಿಲ ಕದವಾಗಬೇಡ,

ಎಂದೂ ಓದದ ಮಾಣಿ, ಅಮಾವಾಸ್ಯೆ ದಿವಸ ಓದಲು ಕುಳಿತ

ಅಕ್ಕರಿಸಿಕೊಂಡು ಅಕ್ಕನ ಮನೆಗೆ ಹೋದರೆ, ಕುಕ್ಕೇಲಿ ರಾಗಿ ತುಂಬಿದೆ.

ಸೊಸೆ ಸತ್ತರೆ ಸೋಬಾನೆ,

ಮಗ ಸತ್ತರೆ ಮನೆಹಾಳು,

ಅಂಕೆಯಲ್ಲಿದ್ದ ಹೆಣ್ಣು ಕಡೋಲ್ಲ, ಮಜ್ಜಿಗೆಯಲ್ಲಿದ್ದ ಬೆಣ್ಣೆ ಕಡೋಲ್ಲ

ಮಲಗುವುದಕ್ಕೆ ಹೋಗಿ ಮಗ ಕೆಟ್ಟ, ಬೀಸುವುದಕ್ಕೆ ಹೋಗಿ ಸೊಸೆ ಕಟ್ಟಳು.

ಅಳಿಯನ ಅರಮನೆಗಿಂತ, ಮಗನ ಕಿರುಮನೆ ಲೇಸು.

ಅಕ್ಕರುಳ್ಳ ಚಿಕ್ಕವ್ವ,ಅಕ್ಕಿ ಹಾಕಿ ಬಾನದಲ್ಲಿಕೊಂಡು ಬರೇ ಮಾತಿಗೆ ಬಾ ಅಂದ್ಲು.

ಅಕ್ಕಿ ಕೊಟ್ಟುಣೋದ್ರೆ ಅಕ್ಕನ ಹಂಗೇನು?

ಅಣ್ಣ ಅಪ್ರಾದಾನ? ಅತ್ತಿಗೆ ಅವಾದಾಳ?

ಅತ್ತೆ ಇಲ್ಲದ ಮನೇಲಿ ಸೊಸೆ ಬಿತ್ತಾರಿ.

"ಜನವಾಣಿ ಬೇರು ಕವಿವಾಣಿ ಹೂವು" ಎಂಬ ಬಿ.ಎಂ.ಶ್ರೀಯವರ ಹೇಳಿಕೆಯಂತೆ ಜಗತ್ತಿನ ಯಾವುದೇ ಶಿಷ್ಟ ಸಾಹಿತ್ಯಕ್ಕೆ ಮೂಲ ಜಾನಪದ ಸಾಹಿತ್ಯವಾಗಿದೆ. ಶಿಷ್ಟ ಸಾಹಿತ್ಯಕ್ಕೆ ಜನಪದ ಸಾಹಿತ್ಯವೇ ತಾಯಿಬೇರು. ಯಾವೊಬ್ಬ ಮಹಾನ್ ಕವಿಗೂ ಸಹ ತನ್ನ ಸುತ್ತಲ ಜನರ ಜೀವನವೇ ಸಾಹಿತ್ಯಕ್ಕೆ ಸ್ಫೂರ್ತಿ ನೀಡುತ್ತದೆ.

ಒಟ್ಟಾರೆಯಾಗಿ ಜಾನಪದ ವಲಯವು ನಮ್ಮ ಶರಣರ, ತತ್ವಪದಕಾರರ, ಸಾಹಿತಿಗಳ ಮೇಲೆ ಬೀರಿರುವ ಪ್ರಭಾವ ಅಷ್ಟಿಷ್ಟಲ್ಲ. ಆದರೂ ಸಹ ಆ ಸಾಹಿತ್ಯವನ್ನು 20 ನೇ ಶತಮಾನದವರೆಗೂ ಅಲಕ್ಷಿಸಿ, ಅಂಚಿಗೆ ತಳ್ಳಲಾಯಿತು. ಈಗ ಅದರ ಸಂಪಾದನೆ ಹುಡುಕಾಟ, ಸಂಗ್ರಹದಂತಹ ಕಾರ್ಯ ನಡೆದರೆ ಶಿಷ್ಟ ಸಾಹಿತ್ಯದ ಜೊತೆಗೆ ದೇಸಿ ಸಾಹಿತ್ಯ ಹೆಗಲು ಕೊಟ್ಟು ಸಾಹಿತ್ಯ ಲೋಕದಲ್ಲಿ ಮಹತ್ವದ ಸ್ಥಾನ ಪಡೆದು ನಿಂತಿದೆ ಎಂದು ಹೇಳಬಹುದು.

**ಆಧಾರ ಗ್ರಂಥಗಳು:**

1. ಕನ್ನಡ ಸಾಹಿತ್ಯ ಕೋಶ: ಸಂ. ರಾಜ್ಯಪ್ಪ ದಳವಾಯಿ ,

2. ಜನಪದ ಸಾಹಿತ್ಯ : ಪ್ರೊ.ಪಿ.ಕೆ ಖಂಡೋಬಾ.

**ಬಸವರಾಜ ಎಂ.ಕೊನೇರಿ**

3. ಜನಪ್ರಿಯ ಗಾದೆಗಳು : ರವಿ

4. ಜನಪದ ದರ್ಶನ : ಡಾ.ವೀರಣ್ಣ ದಂಡೆ.

5. ಜನಪದ ಲೇಖನಗಳ ಸಂಗ್ರಹ: ಡಾ ಎಚ್.ಟಿ ಪೋತೆ

6. ಸಾಮಾಜೊ ಜಾನಪದ : ಡಾ ಎಚ್.ಟಿ ಪೋತೆ